ಹಾಗೆಂದು ಅಣ್ಣನೊಡನೆ ಒಪ್ಪಂದ ಆಗಿದೆಯೆಂದು ಅವಳಿಗೆ ಗೊತ್ತು. ದಿನದ ಇಪ್ಪತ್ನಾಲ್ಕು ಗಂಟೆ ಮುದುಕಿಯನ್ನು ನೋಡಿಕೊಳ್ಳುವುದಕ್ಕೇನಿರುತ್ತದೆ? ಕಾಫಿ, ತಿಂಡಿ, ಊಟದ ಹೊತ್ತಲ್ಲಿ ಅಜ್ಜಮ್ಮನನ್ನು ಆಧಾರ ಕೊಟ್ಟು ಎಬ್ಬಿಸಿ ದಿಂಬಿಗೊರಗಿಸಿ ಕೂರಿಸುವುದು, ಮಗುವಿಗೆ ಕುಡಿಸುವಂತೆ, ತಿನ್ನಿಸುವಂತೆ ಮುತುವರ್ಜಿಯಿಂದ ತಿನ್ನಿಸುವುದು, ದಿನಾ ಬಚ್ಚಲಿಗೆ ಸ್ನಾನಕ್ಕೆ ಎತ್ತಿಕೊಂಡು ಹೋಗುವ ರಗಳೆ ನಿವಾರಿಸಿಕೊಳ್ಳಲು ಕಬ್ಬಿಣದ ಬಾಲ್ದಿಯಲ್ಲಿ ಬಿಸಿನೀರು ತಂದಿಟ್ಟುಕೊಂಡು ಟವೆಲನ್ನು ಅದ್ದಿ, ಹಿಂಡಿ ಮೈ ಮುಖ ವರೆಸಿ ಪೌಡರು ಹಾಕುವುದು, ಮೈಲಿಗೆ ಬಟ್ಟೆಗಳನ್ನು ಒಗೆಯುವುದು, ಹೀಗೆ ಅಗತ್ಯ ಸೇವೆಗಳನ್ನು ನಿಷ್ಠೆಯಿಂದ ಮಾಡುತ್ತಿದ್ದಳು ಚಂಪಾ. ಒಂದೋ, ಎರಡೋ ಬರುತ್ತಿದೆಯೆಂದು ಮುದುಕಮ್ಮ ಕೈಬೆರಳಿನಿಂದ ಸೈಗೆ ಮಾಡಿದರೆ ಬೆಡ್‌ಪ್ಯಾನ್ ಹಿಡಿದು, ಎಲ್ಲಾ ಮುಗಿದ ನಂತರ ಅವರನ್ನು ಶುಚಿಗೊಳಿಸಿ, ಬೆಡ್‌ಪ್ಯಾನಿನಲ್ಲಿ ಸಂಗ್ರಹವಾಗಿದ್ದನ್ನು ಗೊಬ್ಬರದ ಗುಂಡಿಗೆ ಚೆಲ್ಲಿ ಬರುವಾಗ ಹೊಟ್ಟೆಯ ಕರುಳೆಲ್ಲಾ ಕಿತ್ತು ಬರುತ್ತದೆಯೇನೋ ಎನ್ನುವಷ್ಟು ವಾಕರಿಸುತ್ತಿದ್ದಳು ಚಂಪಾ. ಅವಳಿಗೆಂದೇ ಮೀಸಲಾಗಿಟ್ಟುಕೊಂಡಿದ್ದ ಸೋಪಿನಲ್ಲಿ ಅಂಗೈ ಚರ್ಮ ಸುಲಿಯುತ್ತದೆನ್ನುವಷ್ಟು ಉಜ್ಜಿ ಉಜ್ಜಿ ಕೈ ತೊಳೆಯುತ್ತಿದ್ದಳು. ಅರಿವಿಲ್ಲದೆ ಅಂಗೈ ಮೂಗಿನ ಕಡೆ ಹೋಗುವುದನ್ನು ತಪ್ಪಿಸಲು ಅದೆಷ್ಟು ಪ್ರಯತ್ನ ಮಾಡಿದ್ದಳೋ? ಊಟ, ತಿಂಡಿಗೆ ಕೂತಾಗ ಸಹಾ ಎಂತದೋ ದುರ್ವಾಸನೆ ಮೂಗಿಗೆ ಅಡರಿದಂತೆನಿಸಿ ವಾಕರಿಕೆ ಬರುತ್ತಿತ್ತು. ಮನೆ ಒಡತಿ ಇದೆಲ್ಲಾ ಗೊತ್ತಾಗದಿರುವಷ್ಟು ದಡ್ಡಿ ಅಲ್ಲ. ಒಂದು ಕಾಲದಲ್ಲಿ ಅವರೂ ಈ ಅಗ್ನಿದಿವ್ಯ ಅನುಭವಿಸಿದವರು. ಹೊಟ್ಟೆಯಲ್ಲಿ ಹುಟ್ಟಿದ ಮಗ ಇದ್ದರೂ ಗಂಡಸೊಬ್ಬರಿಂದ ಇಂತಾ ಸೇವೆ ಮಾಡಿಸಿಕೊಳ್ಳುವುದು ಅತ್ತೆಗೆ ಜೀವ ಬಾಯಿಗೆ ಬಂದಂತೆ ಹೀನಾಯ. ಗಂಡನಿಂದ ಇಂತಾ ಕೆಲಸ ಮಾಡಿಸುವುದು ಸೊಸೆಗೂ ಅಪಥ್ಯ. "ಕೆಲವು ಸಲ ಹಾಸಿಗೇಲೇ ಎಲ್ಲಾ ಆಗ್ಬಿಡ್ತಿತ್ತು ಮಾರಾಯ್ತೀ. ಮೂರು ಹೊತ್ತೂ ಅವರನ್ನ ಕಾದ್ಕಂಡು ನಾನು ಅಲ್ಲೇ ಕೂತಿರೋಕಾಗುತ್ತಾ? ಅದೆಂತದೋ ಡೈಪರ್ ಅಂತಪ್ಪಾ, ಮಕ್ಕಳಿಗೆ ಹಾಕೋ ಥರದ್ದು. ಯಾರದ್ದೋ ಮಾತು ಕೇಳಿ ಅದನ್ನೂ ತಂದು ನೋಡಿದ್ದಾಯ್ತು. ಅತ್ತೆಗೆ ಯಾಕೋ ಆಗಿರ್ಲಿಲ್ಲ. ಚರ್ಮ ಕರಗಿ ರಣಾರಂಪ ಆಗೋಕೆ ಶುರುವಾಯ್ತು. ಏನ್ಮಾಡ್ತಿ ಹೇಳು..."

ಹೂಂಗುಟ್ಟುತ್ತಿದ್ದಳು ಚಂಪಾ. ಕೆಲಸ ಎಂತಾದ್ದೇ ಇರಲಿ, ತನಗೆ ಹಂಗಿಲ್ಲದ ನೆರಳು ಒದಗಿಸಿಕೊಟ್ಟಿದೆ. ಅಣ್ಣನಿಗಿಷ್ಟು ಆದಾಯ. ಕ್ರಮೇಣ ಚಂಪಾ ತನ್ನ ಕೆಲಸಕ್ಕೆ ಒಗ್ಗಿಕೊಂಡುಬಿಟ್ಟಳು. 'ಇದ್ದಲ್ಲೇ ಸ್ವರ್ಗ ಸೃಷ್ಟಿಸಿಕೊಳ್ಳುವುದಕ್ಕೆ ಮುಖ್ಯ ಬೇಕಾಗಿರುವುದು ಮನಸ್ಸು. ನರಕ ಸೃಷ್ಟಿಯಾಗುವುದೂ ಅದರಿಂದಲೇ. ಆಯ್ಕೆ ತನ್ನ ಕೈಲಿದೆ' ಎಂದು ಮನಸ್ಸು ಗಟ್ಟಿ ಮಾಡಿಕೊಂಡಳು. ಮನೆಯ ಹಿಂತುದಿಯಲ್ಲಿ ಹಿತ್ತಿಲಿಗೆ ತಾಗಿಕೊಂಡಂತಿದ್ದ ಈ ಕೋಣೆ ಮುಂಚೆ ಬೇಡದ ಸಾಮಾನುಗಳನ್ನಿಡುವ ಸ್ಟೋರ್ ಕೋಣೆ ಆಗಿತ್ತು ಎಂದು ಸತ್ಯ ಹೇಳಿದ್ದು ಮನೆಯ ಯಜಮಾಂತಿ ಸುಭದ್ರಮ್ಮ.

"ಹೆಸರಿಗೆ ಹಳ್ಳಿಮನೆ. ಹೋಗೋರು, ಬರೋರು ಅಂತ ಇದ್ದೇ ಇರ್ತಾರೆ. ಮಕ್ಕಳೂ ಸಮ, ಮುದುಕ್ರೂ ಸಮ ಅಂತ ಮಾತಿಗೆ ಹೇಳೋದು. ಎಷ್ಟೋ ಸತಿ ಅವ್ರಿಗೆ ಗೊತ್ತಾಗ್ದಿದ್ದಂಗೆ ಹಾಸಿಗೇಲೇ ಎಲ್ಲಾ ಆಗ್ಬಿಡ್ತಿತ್ತು. ದೊಡ್ಡೋರು ಉಚ್ಚೆ ಹುಯ್ಕಂಡ್ರೆ ಗಬ್ಬುವಾಸನೆ ಇರ್ದೇ ಇರುತ್ತಾ? ಅಪ್ಪಂತೋರು ಮನೆಗೆ ಬಂದ್ರೆ ಜೀವ ಹೋದ್ಹಂಗಾಗ್ತಿತ್ತು. ಅದಕ್ಕೇ ಈ ಕೋಣೇನ ಖಾಲಿ ಮಾಡಿ..."

ಸುಭದ್ರಮ್ಮ ಹೇಳಿದ್ದಷ್ಟನ್ನು ಮಾತ್ರಾ ಕೇಳಿಸಿಕೊಂಡು ಬೇರೆ ಉಪದ್ವ್ಯಾಪಕ್ಕೆ ಹೋಗದೆ ತೆಪ್ಪಗಿರುವುದನ್ನು ಚಂಪಾ ಅಭ್ಯಾಸ ಮಾಡಿಕೊಂಡುಬಿಟ್ಟಳು. ಇದೆಯಲ್ಲ ಗಾದೆ, 'ಬಡವಾ, ನೀ ಮಡಗಿದ ಹಾಗಿರು...'

★★★

ಒಂಥರಾ ಕಮಟು ವಾಸನೆ ಹೊಡೆಯುತ್ತಿದ್ದ ಮುದುಕಮ್ಮನ ಕೋಣೆ ಚಂಪನ ಕೈಚಳಕದಿಂದ